# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕೇಂದ್ರ ಪುರಸ್ಕೃತ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ 2018-19ನೇ ಸಾಲಿನ ಕಾರ್ಯಕ್ರಮ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಉಪ ಶೀರ್ಷಿಕೆ: 106 ರಡಿ ಪೂರಕ ಅಂದಾಜಿನಲ್ಲಿ ಒದಗಿಸಿಕೊಳ್ಳಲಾದ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ

1. ಸರ್ಕಾರದ ಆದೇಶ ಸಂಖ್ಯೆ: ಕೃಇ 61 ಕೃಉಇ 2018 ದಿನಾಂಕ: 04.08.2018.
2. ಸರ್ಕಾರದ ಆದೇಶ ಸಂಖ್ಯೆ: ಕೃಇ 61 ಕೃಉಇ 2018 ದಿನಾಂಕ: 07.08.2018.
3. ಸರ್ಕಾರದ ಆದೇಶ ಸಂಖ್ಯೆ: ಕೃಇ 61 ಕೃಉಇ 2018, ದಿನಾಂಕ: 30.10.2018.
4. ಸರ್ಕಾರದ ಆದೇಶ ಸಂಖ್ಯೆ: ಕೃಇ 61 ಕೃಉಇ 2018, ದಿನಾಂಕ: 27.12.2018.
5. ಸರ್ಕಾರದ ಆದೇಶ ಸಂಖ್ಯೆ: ಕೃಇ 61 ಕೃಉಇ 2018, ದಿನಾಂಕ: 25.01.2019.
6. ಕೇಂದ್ರ ಸರ್ಕಾರದ ಪತ್ರಗಳ ದಿನಾಂಕ: 17.07.2018, 28.09.2018, 09.10.2018, 28.11.2018, 13.12.2018 & 24.12.2018.
7. ಸರ್ಕಾರದ ಆದೇಶ ಸಂಖ್ಯೆ: ಆಇ 706 ವೆಚ್ಚ-4/2018, ದಿನಾಂಕ: 01.12.2018.
8. 2018-19ನೇ ಸಾಲಿನ ಆಯವ್ಯಯ ಪೂರಕ ಅಂದಾಜು-1.
9. ಕೃಷಿ ಆಯುಕ್ತರ ಪತ್ರ ಸಂ: RKVY/GOK/2018-19, ದಿನಾಂಕ: 11.01.2019.

**ಪ್ರಸ್ತಾವನೆ:**

2018-19ನೇ ಸಾಲಿನ ಪರಿಷ್ಕೃತ ಆಯವ್ಯಯದಲ್ಲಿ ಕೇಂದ್ರ ಪುರಸ್ಕೃತ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಲೆಕ್ಕ ಶೀರ್ಷಿಕೆ: 2401-00-800-1-57 ರಡಿ ಒಟ್ಟು ರೂ. 28400.00 ಲಕ್ಷ ಅನುದಾನ ನಿಗದಿಪಡಿಸಲಾಗಿರುತ್ತದೆ.

ಮೇಲೆ ಓದಲಾದ (1)ರ ಸರ್ಕಾರದ ಆದೇಶದಲ್ಲಿ 2017-18ನೇ ಸಾಲಿನ ಉಳಿಕೆ ಅನುದಾನ ರೂ. 38.04 ಕೋಟಿಗಳನ್ನು ಪ್ರಸ್ತುತ ಸಾಲಿನಲ್ಲಿ ಬಳಸಲು ಕೇಂದ್ರ ಸರ್ಕಾರದಿಂದ ಅನುಮತಿ ದೊರಕಿದ್ದ ಹಿನ್ನೆಲೆಯಲ್ಲಿ ಸದರಿ ಅನುದಾನದ ಪೈಕಿ ಲಭ್ಯವಿದ್ದ ಅನುದಾನ ರೂ 33.57 ಕೋಟಿಗಳನ್ನು ಮರುಮೌಲ್ಯೀಕರಣಗೊಳಿಸಿ ಬಿಡುಗಡೆ ಮಾಡಲಾಗಿರುತ್ತದೆ ಹಾಗೂ 2018-19ನೇ ಸಾಲಿಗೆ ವಿವಿಧ ಇಲಾಖೆಗಳಿಗೆ ಒಟ್ಟು **ರೂ. 173.72 ಕೋಟಿ** ಅನುದಾನದ ಮಿತಿಗೊಳಪಟ್ಟು ಕಾರ್ಯಕ್ರಮ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.

ಮೇಲೆ ಓದಲಾದ (2)ರ ಸರ್ಕಾರದ ಆದೇಶದಲ್ಲಿ 2018-19ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ: 2401-00-800-1-57 ಅಡಿ ಕೇಂದ್ರ ಪುರಸ್ಕೃತ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಅನುಷ್ಠಾನಕ್ಕೆ ಒದಗಿಸಲಾಗಿರುವ ಅನುದಾನದಲ್ಲಿ ಕೇಂದ್ರ ಸರ್ಕಾರವು ಬಿಡುಗಡೆ ಮಾಡಿರುವ ಮೊದಲನೇ ಕಂತಿನ ಅನುದಾನಕ್ಕೆ ಪೂರಕವಾಗಿ ರಾಜ್ಯ ಸರ್ಕಾರದ ಪಾಲಿನ ಅನುದಾನ ಸೇರಿಸಿ ಒಟ್ಟು

ರೂ.86.85 ಕೋಟಿಗಳನ್ನು ವಿವಿಧ ಇಲಾಖೆಗಳಿಗೆ ಬಿಡುಗಡೆ ಮಾಡುತ್ತಾ ಕೇಂದ್ರ ಹಾಗೂ ರಾಜ್ಯದ ಪಾಲಿನ ಅನುದಾನವನ್ನು ಶೇ. 60:40ರ ಅನುಪಾತದಲ್ಲಿ ನಿಗದಿಪಡಿಸಿಕೊಂಡು ಘಟಕವಾರು ಹಾಗೂ ವರ್ಗವಾರು ನಿಗಧಿತ ಪ್ರಮಾಣದಲ್ಲಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಸರ್ಕಾರವು ಮಂಜೂರಾತಿ ನೀಡಿರುತ್ತದೆ.

ಮೇಲೆ ಓದಲಾದ (3)ರ ಸರ್ಕಾರದ ಆದೇಶದಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (RKVY) ಯಡಿಯ Additional Fodder Development Programme and Crop Diversification Programme ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ, ಕೇಂದ್ರ ಹಾಗೂ ರಾಜ್ಯದ ಪಾಲಿನ ಅನುದಾನ ಸೇರಿಸಿ ಒಟ್ಟಾರೆ ರೂ. 3.41 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ (4)ರ ಸರ್ಕಾರದ ಆದೇಶದಲ್ಲಿ ಕೇಂದ್ರ ಪುರಸ್ಕೃತ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಕೇಂದ್ರದಿಂದ ಬಿಡುಗಡೆಯಾಗಿದ್ದ ಎರಡನೇ ಕಂತಿನ ಅನುದಾನದ ಪೈಕಿ ಕೇಂದ್ರ ಹಾಗೂ ರಾಜ್ಯದ ಪಾಲಿನ ಅನುದಾನ ಸೇರಿಸಿ ಒಟ್ಟು ರೂ. 73.64 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ (5)ರ ಸರ್ಕಾರದ ಆದೇಶದಲ್ಲಿ ಕೇಂದ್ರ ಪುರಸ್ಕೃತ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿಯ ಆರ್‌ಪಿಎಸ್ & ಎಎಚ್ (Reclamation of Problem Soil & Animal Health) ಕಾರ್ಯಕ್ರಮದ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಬಿಡುಗಡೆ ಮಾಡಿರುವ ಮೊದಲನೇ ಕಂತಿನ ಅನುದಾನಕ್ಕೆ ಪೂರಕವಾಗಿ ರಾಜ್ಯ ಸರ್ಕಾರದ ಪಾಲಿನ ಅನುದಾನ ಸೇರಿಸಿ ಒಟ್ಟು ರೂ.3.20 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

ಮೇಲೆ ಓದಲಾದ (6)ರ ಕೇಂದ್ರ ಸರ್ಕಾರದ ಪತ್ರಗಳಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ 2017-18ನೇ ಸಾಲಿನ ಮರುಮೌಲ್ಯೀಕರಿಸಲಾದ ಅನುದಾನ ರೂ. 38.04 ಕೋಟಿಗಳು ಸೇರಿದಂತೆ, 2018-19ನೇ ಸಾಲಿನ ಮೊದಲನೇ ಕಂತಿನ ಅನುದಾನ (ರೂ. 52.11 ಕೋಟಿ), ಎಎಫ್‌ಡಿಪಿ ಕಾರ್ಯಕ್ರಮದ ಅನುದಾನ (ರೂ. 1.25 ಕೋಟಿ), ಸಿಡಿಪಿ ಕಾರ್ಯಕ್ರಮದ ಅನುದಾನ (ರೂ. 0.80 ಕೋಟಿ), ಎನ್‌ಎಡಿಇಪಿ ಕಾರ್ಯಕ್ರಮದ ಅನುದಾನ (ರೂ. 0.168 ಕೋಟಿ), ಎರಡನೇ ಕಂತಿನ ಅನುದಾನ (ರೂ. 52.11 ಕೋಟಿ), ಆರ್‌ಪಿಎಸ್ ಕಾರ್ಯಕ್ರಮದ ಅನುದಾನ (ರೂ. 1.50 ಕೋಟಿ) ಹಾಗೂ ಎಎಚ್ ಕಾರ್ಯಕ್ರಮದ ಅನುದಾನ (ರೂ. 0.42 ಕೋಟಿ)ಗಳನ್ನು ರಾಜ್ಯಕ್ಕೆ ಬಿಡುಗಡೆ ಮಾಡುತ್ತಾ, ರಾಜ್ಯದ ಪಾಲಿನ ಅನುದಾನ (ಶೇ.40 ರಂತೆ) ಒದಗಿಸಿಕೊಂಡು ವೆಚ್ಚ ಭರಿಸಲು ತಿಳಿಸಿರುತ್ತದೆ.

ಮೇಲೆ ಓದಲಾದ (7)ರ ಆದೇಶದಲ್ಲಿ, 2018-19ನೇ ಸಾಲಿನ ಪ್ರಧಾನ ಲೆಕ್ಕ ಶೀರ್ಷಿಕೆ: 2401-00-800-1-57ರಡಿಯ ಉಪ ಶೀರ್ಷಿಕೆ: 059ರಡಿ ರೂ. 31.97 ಕೋಟಿ ಅನುದಾನವನ್ನು ಇದೇ ಲೆಕ್ಕ ಶೀರ್ಷಿಕೆಯ ಉಪ ಶೀರ್ಷಿಕೆ: 106ರಡಿ ಹೆಚ್ಚುವರಿಯಾಗಿ ಒದಗಿಸುವ ಸಲುವಾಗಿ ಸರ್ಕಾರಕ್ಕೆ ಅಧ್ಯರ್ಪಿಸಿಕೊಳ್ಳಲು ಒಪ್ಪಿಗೆ ನೀಡಲಾಗಿದೆ.

ಮೇಲೆ ಓದಲಾದ (8)ರ 2018-19ನೇ ಸಾಲಿನ ಪೂರಕ ಅಂದಾಜು-1ರಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಲೆಕ್ಕ ಶೀರ್ಷಿಕೆ: 2401-00-800-1-57ರ ಉಪ ಶೀರ್ಷಿಕೆ: 106ರಡಿ ರೂ. 3197.00 ಲಕ್ಷಗಳನ್ನು ಹೆಚ್ಚುವರಿಯಾಗಿ ಒದಗಿಸಲಾಗಿರುತ್ತದೆ.

ಮೇಲೆ ಓದಲಾದ (9)ರ ಕೃಷಿ ಆಯುಕ್ತರ ಪತ್ರದಲ್ಲಿ ಕೇಂದ್ರ ಸರ್ಕಾರವು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಬಿಡುಗಡೆ ಮಾಡಿರುವ ಅನುದಾನಕ್ಕೆ ಪೂರಕವಾಗಿ ರಾಜ್ಯದ ಪಾಲಿನ ಅನುದಾನ ಸೇರಿಸಿ ಕಾರ್ಯಕ್ರಮ ಅನುಷ್ಠಾನಗೊಳಿಸಲು 2018-19ನೇ ಸಾಲಿನಲ್ಲಿ ಉಪ ಶೀರ್ಷಿಕೆ: 106ರಡಿ ವಿವಿಧ ಇಲಾಖೆ/ ಸಂಸ್ಥೆಗಳಿಗೆ ಒಟ್ಟು ರೂ. 31.97 ಕೋಟಿ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಲಾಗಿದೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, 2018-19ರ ಆಯವ್ಯಯ ಲೆಕ್ಕ ಶೀರ್ಷಿಕೆ: 2401-00-800-1-57ರಡಿಯ ಉಪ ಶೀರ್ಷಿಕೆ: 106ರಡಿ ಪೂರಕ ಅಂದಾಜು-1ರಲ್ಲಿ ಒದಗಿಸಿಕೊಳ್ಳಲಾದ ಹೆಚ್ಚುವರಿ ಅನುದಾನ ರೂ. 31.97 ಕೋಟಿಗಳಲ್ಲಿ, "Area Expansion of Cashew" ಉಪ ಯೋಜನೆಗೆ ನಿಗಧಿಪಡಿಸಲಾದ ಅನುದಾನ ರೂ. 13.25 ಕೋಟಿಗಳನ್ನು ಹೊರತುಪಡಿಸಿ ಉಳಿಕೆ ಅನುದಾನವನ್ನು ಬಿಡುಗಡೆ ಮಾಡಲು ತೀರ್ಮಾನಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ; ಕೃಇ 61 ಕೃಉಇ 2018, ಬೆಂಗಳೂರು, ದಿನಾಂಕ: 13.02.2019

2018-19ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ: 2401-00-800-1-57-106 ಅಡಿ ಕೇಂದ್ರ ಪುರಸ್ಕೃತ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಅನುಷ್ಠಾನಕ್ಕೆ ಪೂರಕ ಅಂದಾಜು-1ರಲ್ಲಿ ಒದಗಿಸಿಕೊಳ್ಳಲಾಗಿರುವ ಅನುದಾನದಲ್ಲಿ ಕೇಂದ್ರ ಸರ್ಕಾರವು ಆಗಿಂದಾಗ್ಗೆ ಬಿಡುಗಡೆ ಮಾಡಿರುವ ಹಾಗೂ ರಾಜ್ಯದಿಂದ ಬಿಡುಗಡೆಗೆ ಬಾಕಿ ಇರುವ ಅನುದಾನಕ್ಕೆ ಪೂರಕವಾಗಿ ರಾಜ್ಯ ಸರ್ಕಾರದ ಪಾಲಿನ ಅನುದಾನ ಸೇರಿಸಿ ಒಟ್ಟು **ರೂ.18.72 ಕೋಟಿಗಳನ್ನು (ಹದಿನೆಂಟು ಕೋಟಿ ಎಪ್ಪತ್ತೆರಡು ಲಕ್ಷ ರೂಪಾಯಿಗಳು ಮಾತ್ರ)** ಈ ಕೆಳಕಂಡ ಇಲಾಖೆಗಳಿಗೆ ಬಿಡುಗಡೆ ಮಾಡುತ್ತಾ ಕೇಂದ್ರ ಹಾಗೂ ರಾಜ್ಯದ ಪಾಲಿನ ಅನುದಾನವನ್ನು ಶೇ. 60:40ರ ಅನುಪಾತದಲ್ಲಿ ನಿಗದಿಪಡಿಸಿಕೊಂಡು ಘಟಕವಾರು ಹಾಗೂ ವರ್ಗವಾರು ನಿಗಧಿತ ಪ್ರಮಾಣದಲ್ಲಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಸರ್ಕಾರವು ಈ ಮೂಲಕ ಮಂಜೂರಾತಿ ನೀಡಿದೆ.

(Rs.in crores)

| Sl. No | Department | Project Name | Grant released |
|---|---|---|---|
| I | | **Normal RKVY** | |
| 1 | Agriculture Department | Distribution of Tarpaulins for post harvest processing | **6.67** |
| 2 | Horticulture Department | Incentives for Post harvest management activities in Horticulture | 1.00 |
| | | Integrated Development of Horticulture under PPP-IHD | 3.00 |
| | | **Horticulture Total** | **4.00** |
| 3 | Sericulture Department | Assistance for trenching/mulching in mulberry gardens for seed farmers - pure bivoltine /pure multivoltine (mysore seed area) farmers and bivoltine farmers of the cluster areas & bivoltine hybrid farmers of other areas. | 1.1 |
| | | Assistance for providing disinfection cum fogger and cooler units to stabilize the cocoon crops. | 0.35 |
| | | Package for enhancement of soil health –for quality and productivity. | 0.5 |
| | | Drum kit technology/amit technology for tree mulberry plantation | 0.25 |
| | | Supply of bamboo mountages (chandrikes) for pure mysore seed rearers. | 0.34 |
| | | **Sericulture total** | **2.54** |
| | **Normal RKVY total (A)** | | **13.21** |
| II | Sub-schemes | NADEP compost pits | 0.28 |
| | **Sub-schemes total (B)** | | **0.28** |
| III | Revalidated amount of 2017-18 | Revalidated amount of 2017-18 ( C) | 4.47 |
| IV | 2013-14 Revalidated amount | 2013-14 Unspent balance (D) | 0.76 |
| | | **Grand total (A+B+C+D)** | **18.72** |

**"THE GRANTS FOR THE DEPARTMENTS WILL BE RELEASED UNDER THE HEAD OF ACCOUNT NO.2401-00-800-1-57-106 (PLAN) TO THE CCO OF THE CONCERNED DEPARTMENTS / INSTITUTIONS/UNIVERSITIES. FURTHER, THE BILLS SUBMITTED BY DRAWING OFFICERS OF THE DEPARMENTS/INSTITUTIONS/UNIVERSITIES SHALL BE COUNTERSIGNED BY THE CHIEF ACCOUNTS OFFICER & FINANCIAL ADVISOR ON BEHALF OF THE DIRECTOR OF AGRICULTURE, BENGALURU.**

ಕೃಷಿ ನಿರ್ದೇಶಕರು ಕೇಂದ್ರ ಸರ್ಕಾರವು ಆಗಿಂದ್ದಾಗ್ಗೆ ಹೊರಡಿಸುವ ಮಾರ್ಗಸೂಚಿ ಅನುಸಾರ ಯೋಜನೆಯನ್ನು ಅನುಷ್ಠಾನಗೊಳಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 100 ವೆಚ್ಚ-4/2019, ದಿನಾಂಕ: 04.02.2019 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

B S Nagarathnam

(ಬಿ.ಎಸ್. ನಾಗರತ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ (ಯೋಜನೆ)
13/02/19

ಇವರಿಗೆ:-

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ) / (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-01.
2. ಪ್ರಧಾನ ಮಹಾಲೇಖಪಾಲರು (A&E), ಕರ್ನಾಟಕ, ಬೆಂಗಳೂರು.
3. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ, ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ, ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
7. ಸರ್ಕಾರದ ಕಾರ್ಯದರ್ಶಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ, ಬೆಂಗಳೂರು.
8. ಕೃಷಿ ಆಯುಕ್ತರು,/ಕೃಷಿ ನಿರ್ದೇಶಕರು, ಶೇಷಾದ್ರಿ ರಸ್ತೆ, ಬೆಂಗಳೂರು.
9. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು.
10. ಆಯುಕ್ತರು, ತೋಟಗಾರಿಕೆ ಇಲಾಖೆ, ಬೆಂಗಳೂರು.
11. ಆಯುಕ್ತರು, ರೇಷ್ಮೆ ಇಲಾಖೆ ಬೆಂಗಳುರು.
12. ಆಯುಕ್ತರು, ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ, ಬೆಂಗಳೂರು
13. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
14. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
15. ನಿರ್ದೇಶಕರು, TNMC, ಖನಿಜ ಭವನ ಬೆಂಗಳೂರು.
16. ಸರ್ಕಾರದ ಅಧೀನ ಕಾರ್ಯದರ್ಶಿ (FR & CC), ಆರ್ಥಿಕ ಇಲಾಖೆ, ಬೆಂಗಳೂರು.
17. ಸರ್ಕಾರದ ಅಧೀನ ಕಾರ್ಯದರ್ಶಿ (ವೆಚ್ಚ- 4&5), ಆರ್ಥಿಕ ಇಲಾಖೆ, ಬೆಂಗಳೂರು
18. ಆಂತರಿಕ ಆರ್ಥಿಕ ಸಲಹೆಗಾರರು ಕೃಷಿ ಮತ್ತು ತೋಟಗಾರಿಕೆ ಇಲಾಖೆ, ಬೆಂಗಳೂರು
19. ಶಾಖೆಯ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.